**ನಿರ್ದೇಶಕರು, (ಇ-ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:17.10.2019 ರಂದು ಪೂರ್ವಾಹ್ನ 11:00 ಗಂಟೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಸಭಾ ಕೊಠಡಿಯಲ್ಲಿ ಬಾಪೂಜಿ ಸೇವಾ ಕೇಂದ್ರದಲ್ಲಿ ಉಂಟಾಗುತ್ತಿರುವ ಸಮಸ್ಯೆಗಳ ಬಗ್ಗೆ – Brain Storming Session ಬಗ್ಗೆ ಜರುಗಿದ ಸಭೆಯ ನಡವಳಿಗಳು.**

**ಸಭೆಗೆ ಹಾಜರಾದ ಅಧಿಕಾರಿ/ಸಿಬ್ಬಂದಿಗಳು:** (ಹಾಜರಾತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ)

ಸಭೆಯ ಅಧ್ಯಕ್ಷತೆ ವಹಿಸಿದ್ದ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರನ್ನು ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ನಿರ್ದೇಶಕರು(ಇ-ಆಡಳಿತ) ರವರು ಸ್ವಾಗತಿಸಿದರು.

1. ಗ್ರಾಮ ಪಂಚಾಯತಿಗಳಲ್ಲಿ ಸೇವೆಗಳ ಅರ್ಜಿಯನ್ನು ಸಕಾಲ ತಂತ್ರಾಂಶದಲ್ಲಿ ನೋಂದಣಿ ಮಾಡದೇ ಸಕಾಲ ಅಧಿನಿಯಮದ ಉಲ್ಲಂಘನೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ವರ್ಷವಾರು ಸಕಾಲ ಸೇವೆಗಳ ವಿಲೇವಾರಿಯಲ್ಲಿ ಹಿನ್ನಡೆಯಾಗಿದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು. ಅದರಂತೆ ಯಾವ ಕಾರಣಕ್ಕಾಗಿ ಗ್ರಾಮ ಪಂಚಾಯತಿಗಳಲ್ಲಿ ಸಕಾಲ ಅಧಿನಿಯಮದ ಉಲ್ಲಂಘನೆಯಾಗುತ್ತಿದೆ ಎಂಬುದನ್ನು ಸಭೆಯಲ್ಲಿ ಚರ್ಚಿಸಲಾಯಿತು.
    - 2017-18 ಆರ್ಥಿಕ ವರ್ಷದವರೆಗೆ "ಅಕುಶಲ ಕಾರ್ಮಿಕರಿಗೆ ಉದ್ಯೋಗ ಚೀಟಿಯನ್ನು ಒದಗಿಸುವುದು (MGNREGS)" ಮತ್ತು "ಅಕುಶಲ ಕಾರ್ಮಿಕರಿಗೆ ಉದ್ಯೋಗ ಒದಗಿಸುವುದು (MGNREGS)" ಸೇವೆಯನ್ನು endtoendnrega ತಂತ್ರಾಂಶದ ಮೂಲಕ ಒದಗಿಸಲಾಗುತ್ತಿತ್ತು. ಕಳೆದ ಆರ್ಥಿಕ ವರ್ಷದಿಂದ endtoendnrega ತಂತ್ರಾಂಶವು ಸ್ಥಗಿತಗೊಂಡಿರುವುದರಿಂದ, ಸದರಿ ಸಕಾಲ ಸೇವೆಗಳ ನೋಂದಣಿ ಮಾಡಲಾಗುತ್ತಿಲ್ಲವೆಂದು ತಿಳಿಸಿದರು.
    - ಕಳೆದ 06 ತಿಂಗಳಿಂದ "ಕರ ನಿರ್ಧರಣಾ ಪಟ್ಟಿ ಬದಲಾವಣೆ" ಸೇವೆಯನ್ನು ಪಂಚತಂತ್ರ ತಂತ್ರಾಂಶದಲ್ಲಿ disable ಮಾಡಲಾಗಿದ್ದು, ಸಕಾಲ ಸೇವೆಯ ನೋಂದಣಿ ಮಾಡಲು ಸಾಧ್ಯವಾಗುತ್ತಿಲ್ಲವೆಂದು ತಿಳಿಸಿದರು.
    - ಪಂಚತಂತ್ರ ತಂತ್ರಾಂಶದಲ್ಲಿ 2019-20ನೇ ಸಾಲಿನಿಂದ ಸಕಾಲ ಸೇವೆಗಳಿಗೆ workflow module ಅನ್ನು ಅಳವಡಿಸಲಾಗಿದ್ದು, ಎಲ್ಲಾ ಸೇವೆಗಳನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಡಿಜಿಟಲ್ ಸಿಗ್ನೇಚರ್ ನೊಂದಿಗೆ ನೀಡುವಂತೆ ತಂತ್ರಾಂಶದಲ್ಲಿ ಬದಲಾವಣೆ ಮಾಡಲಾಗಿದೆ.
    - "ಕಟ್ಟಡ ಲೈಸೆನ್ಸ್" ಮತ್ತು "ವಾಣಿಜ್ಯ ಲೈಸೆನ್ಸ್" ಹೊರುತು ಪಡಿಸಿ, ಬೇರೆ ಎಲ್ಲಾ ಸೇವೆಗಳಿಗೆ ಪ್ರಮಾಣ ಪತ್ರವು ಇಲ್ಲದೇ ಇರುವುದರಿಂದ, ದೃಢೀಕರಣ ಮತ್ತು ಮಾಹಿತಿಯನ್ನು ನೀಡಲಾಗುತ್ತಿದೆ. ಆದುದರಿಂದ ಸದರಿ ಸೇವೆಗಳಿಗೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಡಿಜಿಟಲ್ ಸಹಿ ಇಲ್ಲದೇ ಗ್ರಾಮ ಪಂಚಾಯತ್ ಕಾರ್ಯದರ್ಶಿ/ದ್ವಿತೀಯ ದರ್ಜೆ ಸಹಾಯಕರ ಬಯೋಮೆಟ್ರಿಕ್ ಯೊಂದಿಗೆ ವಿತರಿಸಬಹುದಾಗಿದೆ.
    - ಗ್ರಾಮ ಪಂಚಾಯತ್ ಗಳಲ್ಲಿ ಈ ಸೇವೆಗಳನ್ನು ಹೊರತುಪಡಿಸಿ, "ನಮೂನೆ 9/11A" ಮತ್ತು "ನಮೂನೆ 11B" ಸೇವೆಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ವಿತರಿಸುತ್ತಿರುವುದರಿಂದ, ಸದರಿ ಸೇವೆಗಳನ್ನು ಸಕಾಲ ಅಧಿನಿಯಮದಲ್ಲಿ ಸೇರ್ಪಡೆಗೊಳಿಸಬಹುದಾಗಿದೆ ಎಂದು ಸಭೆಯಲ್ಲಿ ಚರ್ಚಿಸಲಾಯಿತು. ಅದರಂತೆ, ಈಗಾಗಲೇ "ನಮೂನೆ 9/11A ಮತ್ತು 11B" ಸೇವೆಗಳನ್ನು ಸಕಾಲ ಅಧಿನಿಯಮದಲ್ಲಿ ಸೇರ್ಪಡೆಗೊಳಿಸಲು ಕ್ರಮಕೈಗೊಳ್ಳಲಾಗಿದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.

...2

ಸಂ:ಗ್ರಾಅಪ/32/ಗ.ಕೋಶ/2019 ದಿನಾಂಕ: 22/10/2019

ನಿರ್ಣಯಗಳು:

- "ಅಕುಶಲ ಕಾರ್ಮಿಕರಿಗೆ ಉದ್ಯೋಗ ಚೀಟಿಯನ್ನು ಒದಗಿಸುವುದು (MGNREGS)" ಮತ್ತು "ಅಕುಶಲ ಕಾರ್ಮಿಕರಿಗೆ ಉದ್ಯೋಗ ಒದಗಿಸುವುದು (MGNREGS)" ಸೇವೆಗಳನ್ನು ನೋಂದಣಿ ಮಾಡುವಂತೆ endtoendnrega ತಂತ್ರಾಂಶದಲ್ಲಿ ಮಾರ್ಪಾಡು ಮಾಡುವುದು.

**(ಕ್ರಮ: ಆಯುಕ್ತರು, ಎಂ.ಜಿ.ಎನ್.ಆರ್.ಇ.ಜಿ.ಎ)**

- "ಕರ ನಿರ್ಧರಣಾ ಪಟ್ಟಿ ಬದಲಾವಣೆ" ಸೇವೆಯ ಅರ್ಜಿಯನ್ನು ನೋಂದಣಿ ಮಾಡುವಂತೆ ಪಂಚತಂತ್ರ ತಂತ್ರಾಂಶವನ್ನು ಇ-ಸ್ವತ್ತು ತಂತ್ರಾಂಶದೊಂದಿಗೆ integrate ಮಾಡಿ, ಆಯ್ಕೆಯನ್ನು enable ಮಾಡುವುದು.

**(ಕ್ರಮ: ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ)**

- "ಕಟ್ಟಡ ಲೈಸೆನ್ಸ್" ಮತ್ತು "ವಾಣಿಜ್ಯ ಲೈಸೆನ್ಸ್" ಹೊರತುಪಡಿಸಿ, ಬೇರೆ ಎಲ್ಲಾ ಸಕಾಲ ಸೇವೆಗಳ ದೃಢೀಕರಣ ಪತ್ರಗಳನ್ನು ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಗ್ರಾಮ ಪಂಚಾಯತ್ ಕಾರ್ಯದರ್ಶಿ/ದ್ವಿತೀಯ ದರ್ಜೆ ಸಹಾಯಕರು ರವರ ಬಯೋಮೆಟ್ರಿಕ್ ನೊಂದಿಗೆ ವಿತರಿಸುವಂತೆ ತಂತ್ರಾಂಶದಲ್ಲಿ ಮಾರ್ಪಾಡು ಮಾಡುವುದು.

**(ಕ್ರಮ: ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ & ನಿರ್ದೇಶಕರು(ಇ-ಆಡಳಿತ)**

- ಆನ್ ಲೈನ್ Service Module ಬಗ್ಗೆ ತರಬೇತಿಯನ್ನು ಆಯೋಜಿಸುವುದು.

**(ಕ್ರಮ: ನಿರ್ದೇಶಕರು(ಇ-ಆಡಳಿತ)**

2. ಸಕಾಲ ಸೇವೆಗಳನ್ನು ಹೊರತುಪಡಿಸಿ, ಇತರೆ 14 ಸೇವೆಗಳನ್ನು ಬಾಪೂಜಿ ಸೇವಾ ಕೇಂದ್ರದ ಮೂಲಕ ವಿತರಿಸಲಾಗುತ್ತಿದ್ದು, ಸದರಿ ಸೇವೆಗಳ ಪ್ರಮಾಣ ಪತ್ರಗಳನ್ನು ದೃಢೀಕರಿಸಿ ಎನ್.ಐ.ಸಿ ರವರಿಗೆ ನೀಡಬೇಕಾಗಿದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.

3. ಅದರಂತೆ, ಪಂಚಾಯತ್ ರಾಜ್ ಇಲಾಖೆಯಿಂದ ಶಾಖೆಯ ಅಧಿಕಾರಿಗಳೊಂದಿಗೆ ಸಭೆಯನ್ನು ಏರ್ಪಡಿಸಿ ಸೇವೆಗಳ ಪ್ರಮಾಣ ಪತ್ರಗಳನ್ನು ದೃಢೀಕರಿಸಿ ನೀಡುವುದು.

**(ಕ್ರಮ:ನಿರ್ದೇಶಕರು (ಪಂ.ರಾಜ್-1)**

4. ಪ್ರಸ್ತುತ ಪಂಚತಂತ್ರ ತಂತ್ರಾಂಶದ ಮೂಲಕ ವಿತರಿಸಲಾಗುತ್ತಿರುವ ಪ್ರಮಾಣ ಪತ್ರಗಳಲ್ಲಿ ಸಾಕಷ್ಟು ತೊಂದರೆಗಳಿದ್ದು, ತಂತ್ರಾಂಶದಲ್ಲಿ ಬದಲಾವಣೆ ಮಾಡುವಂತೆ ಸಹಾಯಕ ನಿರ್ದೇಶಕರು, ಕೊಪ್ಪ ತಾ.ಪಂ, ಚಿಕ್ಕಮಗಳೂರು ಜಿಲ್ಲಾ ಪಂಚಾಯತ್ ರವರು ಸಭೆಗೆ ಕೋರಿದರು.

   ಅದರಂತೆ ಟಿಪ್ಪಣಿಯನ್ನು ಇಲಾಖೆಗೆ ನೀಡುವಂತೆ ರಾಜ್ಯ ಯೋಜನಾ ವ್ಯವಸ್ಥಾಪಕರು ತಿಳಿಸಿದರು.

**(ಕ್ರಮ: ಸಹಾಯಕ ನಿರ್ದೇಶಕರು**

5. ಕರ್ನಾಟಕ ಸಕಾಲ ಕಾಯ್ದೆ 2011 ರನ್ವಯ ಬೇರೆ ಇಲಾಖೆಯಲ್ಲಿ ನಿಗದಿತ ಅವಧಿಯಲ್ಲಿ ಸೇವೆಯನ್ನು ವಿಲೇವಾರಿಗೊಳಿಸುವ ಅಧಿಕಾರಿಗಳಿಗೆ ಇಲಾಖೆಯಿಂದ ಪ್ರಶಂಸಾ ಪತ್ರವನ್ನು ನೀಡಲಾಗುತ್ತಿದ್ದು, ಅದರಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯಿಂದ ನಿಗದಿತ ಅವಧಿಯಲ್ಲಿ ಸೇವೆಯನ್ನು ವಿಲೇವಾರಿ

ಸಂ:ಗ್ರಾಅಪ/32/ಗ.ಕೋಶ/2019 ದಿನಾಂಕ: 22/10/2019

ಮಾಡುತ್ತಿರುವ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಪ್ರಶಂಸಾ ಪತ್ರವನ್ನು ನೀಡಲು ಸಭೆಯಲ್ಲಿ ಹಾಜರಿದ್ದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಕೋರಿದರು.

**(ಕ್ರಮ: ನಿರ್ದೇಶಕರು (ಇ-ಆಡಳಿತ)**

6. ನಿಗದಿಪಡಿಸಿದ ದಿನಾಂಕದ ನಂತರ ಬಾಕಿ ಇರುವ ಸಕಾಲ ಸೇವೆಗಳ ಮಾಹಿತಿಯನ್ನು Alert SMS ಮೂಲಕ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಪಂಚತಂತ್ರ ತಂತ್ರಾಂಶದ ಮುಖಾಂತರ ಕಳುಹಿಸುವಂತೆ ಸಭೆಯಲ್ಲಿ ನೆರೆದಿದ್ದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಕೋರಿದರು.

**(ಕ್ರಮ: ಎನ್.ಐ.ಸಿ)**

7. <u>ಪಹಣಿ ಪತ್ರ ವಿತರಣೆಯಲ್ಲಿ ಉಂಟಾಗುತ್ತಿರುವ ಸಮಸ್ಯೆಗಳು</u>:
   - 2018-19ನೇ ಸಾಲಿನಿಂದ RTC ವಿತರಣೆಯಲ್ಲಿ <u>wallet system</u> ನ್ನು <u>ಅಳವಡಿಸಲಾಗಿದ್ದು</u>, ಸದರಿ ಆರ್ಥಿಕ ವರ್ಷದಿಂದ ಬಾಪೂಜಿ ಸೇವಾ ಕೇಂದ್ರಗಳ ಮೂಲಕ ವಿತರಿಸುವ RTC ಗಳ ಸಂಖ್ಯೆಯಲ್ಲಿ ಹಿನ್ನಡೆಯಾಗಿದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.
   - Wallet system ಅಳವಡಿಸಿದ ನಂತರ wallet ಗಳಿಗೆ ರೀಚಾರ್ಜ್ ಮಾಡಲು ಬಾಪೂಜಿ ಸೇವಾ ಕೇಂದ್ರ ಖಾತೆಗಳಿಗೆ ಇಂಟರ್ನೆಟ್ ಬ್ಯಾಂಕಿಂಗ್ ಸೇವೆಯನ್ನು ಪಡೆಯಲು ಗ್ರಾಮ ಪಂಚಾಯತಿಗಳಿಗೆ ಸೂಚಿಸಲಾಗಿತ್ತು. ಆದರೆ ಹಲವಾರು ಎಸ್.ಬಿ.ಐ. ಬ್ರಾಂಚ್ ರವರು ಬಾಪೂಜಿ ಸೇವಾ ಕೇಂದ್ರ ಖಾತೆಗಳಿಗೆ ಇಂಟರ್ನೆಟ್ ಬ್ಯಾಂಕಿಂಗ್ ಸೇವೆಯನ್ನು ನೀಡಲು ನಿರಾಕರಿಸುತ್ತಿದ್ದಾರೆ ಎಂಬುದನ್ನು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಯ ಗಮನಕ್ಕೆ ತಂದರು.

**(ಕ್ರಮ: ನಿರ್ದೇಶಕರು (ಇ-ಆಡಳಿತ)**

   - ಕೆಲವೊಂದು ಎಸ್.ಬಿ.ಐ. ಬ್ರಾಂಚ್ ರವರು ಬಾಪೂಜಿ ಸೇವಾ ಕೇಂದ್ರ ಖಾತೆಗಳಿಗೆ Vyapaar Internet Banking ಸೇವೆಯನ್ನು ಒದಗಿಸಲಾಗಿದ್ದು, Vyapaar Internet Banking ಸೇವೆಯಿಂದ wallet ಗಳನ್ನು ರೀಚಾರ್ಜ್ ಮಾಡಲು ಸಾಧ್ಯವಾಗುತ್ತಿಲ್ಲವೆಂದು ಸಭೆಯಲ್ಲಿ ಹಾಜರಿದ್ದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಸಭೆಗೆ ತಿಳಿಸಿದರು.

**(ಕ್ರಮ: ನಿರ್ದೇಶಕರು (ಇ-ಆಡಳಿತ)**

   - ಅದರಂತೆ, ಭೂಮಿ ತಂತ್ರಾಂಶದ ತಂಡದವರಿಗೆ ತಿಳಿಸಿ ಸರಿಪಡಿಸಿಕೊಡುವಂತೆ ಕೋರುವುದಾಗಿ ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.

8. ಬಾಪೂಜಿ ಸೇವಾ ಕೇಂದ್ರಗಳ ಮೂಲಕ B2C ಸೇವೆಗಳನ್ನು ನೀಡುವಂತೆ ಅವಕಾಶ ಕಲ್ಪಿಸಿಕೊಡಲು ಸಭೆಯಲ್ಲಿ ನೆರೆದಿದ್ದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಕೋರಿದರು.

   ಅದರಂತೆ, ಈಗಾಗಲೇ Paytm ಇನ್ನು ಮುಂತಾದ Service Providers ಗಳೊಂದಿಗೆ ಚರ್ಚಿಸಲಾಗುತ್ತಿದ್ದು, ಸದ್ಯದಲ್ಲೇ B2C ಸೇವೆಗಳನ್ನು ನೀಡುವಂತೆ ಅವಕಾಶ ಕಲ್ಪಿಸಿಕೊಡುವುದಾಗಿ ಸಭೆಗೆ ತಿಳಿಸಿದರು.

9. ಬಾಪೂಜಿ ಸೇವಾ ಕೇಂದ್ರಗಳ ಸಮರ್ಪಕ ನಿರ್ವಹಣೆಗಾಗಿ IEC ಮಾಡಿಸುವಂತೆ ಕೋರಿದರು.

**ಸಂ:ಗ್ರಾಅಪ/32/ಗ.ಕೋಶ/2019** **ದಿನಾಂಕ: 22/10/2019**

10. ಬಾಪೂಜಿ ಸೇವಾ ಕೇಂದ್ರಕ್ಕಾಗಿ ಪ್ರತ್ಯೇಕ ತಂತ್ರಾಂಶವನ್ನು ವಿನ್ಯಾಗೊಳಿಸಲಾಗುತ್ತಿದೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಎಲ್ಲಾ ಸೇವೆಗಳನ್ನು ಆನ್ ಲೈನ್ ಮೂಲಕ ವಿತರಿಸುವಂತೆ Payment Gateway ಅನ್ನು ಪಡೆಯಲಾಗಿದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಯ ಗಮನಕ್ಕೆ ತಂದರು.
11. ಬಾಪೂಜಿ ಸೇವಾ ಕೇಂದ್ರಗಳ ಸಮರ್ಪಕ ನಿರ್ವಹಣೆಗಾಗಿ ಪ್ರತ್ಯೇಕವಾಗಿ ಡೇಟಾಎಂಟ್ರಿ ಆಪರೇಟರ್ ಗಳನ್ನು ಗ್ರಾಮ ಪಂಚಾಯತಿಗಳಿಗೆ ನೀಡಲು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ಕೋರಿದರು.

ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

ಸಂ:ಗ್ರಾಅಪ/32/ಗ.ಕೋಶ/2019
ದಿನಾಂಕ: 22/10/2019.

(ವಿ. ನಾಗರಾಜ)
ನಿರ್ದೇಶಕರು (ಇ-ಆಡಳಿತ) ಹಾಗೂ
ಪ/ನಿ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

1. ನಿರ್ದೇಶಕರು(ಪಂ.ರಾಜ್-1), ಗ್ರಾಅಪ ಇಲಾಖೆ, ಬೆಂಗಳೂರು.
2. ನಿರ್ದೇಶಕರು(ಪಂ.ರಾಜ್- 2), ಗ್ರಾಅಪ ಇಲಾಖೆ, ಬೆಂಗಳೂರು.
3. ಸಲಹೆಗಾರರು, ಗ್ರಾಅಪ ಇಲಾಖೆ, ಬೆಂಗಳೂರು.
4. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಂಸ್ಥೆ, ಮೈಸೂರು.
5. ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
6. ಸಹಾಯಕ ನಿರ್ದೇಶಕರು(ಇ-ಆಡಳಿತ), ಗ್ರಾಅಪ ಇಲಾಖೆ, ಬೆಂಗಳೂರು.
7. ಉಪ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್, ಕೋಲಾರ.
8. ಸಹಾಯಕ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ.
9. ಸಹಾಯಕ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ.
10. ಕಾರ್ಯನಿರ್ವಹಣಾಧಿಕಾರಿಗಳು, ತಾಲ್ಲೂಕು ಪಂಚಾಯತ್, ಬೆಂಗಳೂರು ಪೂರ್ವ, ಜಿ.ಪಂ. ಬೆಂಗಳೂರು ನಗರ.
11. ಕಾರ್ಯನಿರ್ವಹಣಾಧಿಕಾರಿಗಳು, ತಾಲ್ಲೂಕು ಪಂಚಾಯತ್, ಮೈಸೂರು, ಜಿ.ಪಂ. ಮೈಸೂರು.
12. ಸಹಾಯಕ ನಿರ್ದೇಶಕರು, ತಾಲ್ಲೂಕು ಪಂಚಾಯತ್, ಕೊಪ್ಪ.
13. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ಮೆನ್ನಬೆಟ್ಟು.
14. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ರಾಜಾನುಕುಂಟೆ.
15. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ಸೋಮನಹಳ್ಳಿ.
16. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ಪಾಲಿಬೆಟ್ಟ, ವಿರಾಜಪೇಟೆ ತಾ.ಪಂ.,
17. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ಹಾರೋಹಳ್ಳಿ(ಜ), ತಾ.ಪಂ. ಮೈಸೂರು.

18. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ಕಾಡೂರು, ತಾ.ಪಂ. ಉಡುಪಿ.
19. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ದಬ್ಬೆಘಟ್ಟ, ತಾ.ಪಂ. ಮಧುಗಿರಿ.
20. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ಕಾಡಳ್ಳಿ, ತಾ.ಪಂ. ಕನಕಪುರ.
21. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ಬಿಳುಗುಂಬ, ತಾ.ಪಂ. ಮಾಗಡಿ.
22. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ಅಗಲಗುರ್ಕಿ, ತಾ.ಪಂ. ಚಿಕ್ಕಬಳ್ಳಾಪುರ.
23. ಜಿಲ್ಲಾ ಯೋಜನಾ ವ್ಯವಸ್ಥಾಪಕರು, ಜಿಲ್ಲಾ ಪಂಚಾಯತ್, ತುಮಕೂರು.
24. ಜಿಲ್ಲಾ ಯೋಜನಾ ವ್ಯವಸ್ಥಾಪಕರು, ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ.
25. ಜಿಲ್ಲಾ ಯೋಜನಾ ವ್ಯವಸ್ಥಾಪಕರು, ಜಿಲ್ಲಾ ಪಂಚ್ತಾಯತ್, ಶಿವಮೊಗ್ಗ.
26. ಜಿಲ್ಲಾ ಯೋಜನಾ ವ್ಯವಸ್ಥಾಪಕರು, ಜಿಲ್ಲಾ ಪಂಚಾಯತ್, ಉಡುಪಿ.
27. ಶ್ರೀ ಪ್ರಶಾಂತ್, ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
28. ಶ್ರೀ ನಿತಿನ್ ನಾಯ್ಕ್, ಸೀನಿಯರ್ ಪ್ರೋಗ್ರಾಮರ್, ಎನ್.ಐ.ಸಿ, ಬೆಂಗಳೂರು.
29. ರಾಜ್ಯ ಯೋಜನಾ ವ್ಯವಸ್ಥಾಪಕರು (ಇ-ಪಂಚಾಯತ್), ಗ್ರಾಅಪ ಇಲಾಖೆ, ಬೆಂಗಳೂರು.
30. ತಾಂತ್ರಿಕ ಸಮಾಲೋಚಕರು(ಇ-ಪಂಚಾಯತ್), ಗ್ರಾಅಪ ಇಲಾಖೆ, ಬೆಂಗಳೂರು.

ಪ್ರತಿ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಇವರ ಆಪ್ತ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ, ಬೆಂಗಳೂರು.

# ಅನುಬಂಧ

**ಸಂ:ಗ್ರಾಅಪ/32/ಗ.ಕೋಶ/2019** **ದಿನಾಂಕ: 22/10/2019**

**ದಿನಾಂಕ:17.10.2019 ರಂದು ಪೂರ್ವಾಹ್ನ 11:00 ಗಂಟೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಸಭಾ ಕೊಠಡಿಯಲ್ಲಿ ಬಾಪೂಜಿ ಸೇವಾ ಕೇಂದ್ರದಲ್ಲಿ ಉಂಟಾಗುತ್ತಿರುವ ಸಮಸ್ಯೆಗಳ ಬಗ್ಗೆ – Brain Storming Session ಬಗ್ಗೆ ಜರುಗಿದ ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ಸಿಬ್ಬಂದಿಗಳು.**

(ಶ್ರೀಮತಿ/ಶ್ರೀ)

1. ವಿ. ನಾಗರಾಜ, ನಿರ್ದೇಶಕರು(ಇ-ಆಡಳಿತ), ಗ್ರಾಅಪ ಇಲಾಖೆ, ಬೆಂಗಳೂರು.
2. ಎಂ.ಕೆ. ಕೆಂಪೇಗೌಡ, ಸಲಹೆಗಾರರು, ಗ್ರಾಅಪ ಇಲಾಖೆ, ಬೆಂಗಳೂರು.
3. ಗಗನ್ ಎ.ಎಸ್., ಸಹಾಯಕ ನಿರ್ದೇಶಕರು(ಇ-ಆಡಳಿತ), ಗ್ರಾಅಪ ಇಲಾಖೆ, ಬೆಂಗಳೂರು.
4. ಸಂಜೀವಪ್ಪ, ಉಪ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್, ಕೋಲಾರ.
5. ಕೆ. ಮಂಜುನಾಥ, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಬೆಂಗಳೂರು ಪೂರ್ವ.
6. ಕೃಷ್ಣಕುಮಾರ್ ಸಿ.ಆರ್., ಕಾರ್ಯನಿರ್ವಹಣಾಧಿಕಾರಿಗಳು, ತಾಲ್ಲೂಕು ಪಂಚಾಯತ್, ಮೈಸೂರು.
7. ಚೇತನ್ ಕೆ.ಜಿ., ಸಹಾಯಕ ನಿರ್ದೇಶಕರು, ತಾಲ್ಲೂಕು ಪಂಚಾಯತ್, ಕೊಪ್ಪ, ಜಿ.ಪಂ. ಚಿಕ್ಕಮಗಳೂರು.
8. ರಮ್ಯ ಕೆ.ಎಸ್., ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ಮೆನ್ನಬೆಟ್ಟು.
9. ರಾಜೇಶ್ ಹೆಚ್.ಆರ್., ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ರಾಜಾನುಕುಂಟೆ.
10. ಹೆಚ್. ಬಿ. ಸಿದ್ಧರಾಜು, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ಸೋಮನಹಳ್ಳಿ.
11. ಶೋಭಾರಾಣಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ಹಾರೋಹಳ್ಳಿ(ಜೆ).
12. ಮಹೇಶ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ಕಾಡೂರು.
13. ಸುಬ್ಬರಾಜು ಅರಸ್, ವಿ.ಆರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ದಬ್ಬೆಘಟ್ಟ.
14. ಮಧುರೇಶ್ವರಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ಕಾಡಳ್ಳಿ.
15. ಹರೀಶ್ ಬಿ.ಟಿ., ಜಿಲ್ಲಾ ಯೋಜನಾ ವ್ಯವಸ್ಥಾಪಕರು, ಜಿಲ್ಲಾ ಪಂಚಾಯತ್, ತುಮಕೂರು.
16. ಬಸವರಾಜು, ಜಿಲ್ಲಾ ಯೋಜನಾ ವ್ಯವಸ್ಥಾಪಕರು, ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ.
17. ಪ್ರದೀಪ್, ಜಿಲ್ಲಾ ಯೋಜನಾ ವ್ಯವಸ್ಥಾಪಕರು, ಜಿಲ್ಲಾ ಪಂಚಾಯತ್, ಶಿವಮೊಗ್ಗ.
18. ಹರೀಶ್ ರಾಜ್, ಜಿಲ್ಲಾ ಯೋಜನಾ ವ್ಯವಸ್ಥಾಪಕರು, ಜಿಲ್ಲಾ ಪಂಚಾಯತ್, ಉಡುಪಿ.
19. ಪ್ರಶಾಂತ್, ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
20. ನಿತಿನ್ ನಾಯ್ಕ್, ಸೀನಿಯರ್ ಪ್ರೋಗ್ರಾಮರ್, ಎನ್.ಐ.ಸಿ, ಬೆಂಗಳೂರು.
21. ಮಹಮ್ಮದ್ ಇಮ್ತಿಯಾಜ್, ರಾಜ್ಯ ಯೋಜನಾ ವ್ಯವಸ್ಥಾಪಕರು (ಇ-ಪಂಚಾಯತ್), ಗ್ರಾಅಪ ಇಲಾಖೆ, ಬೆಂಗಳೂರು.
22. ಅಮೃತವರ್ಷಿಣಿ, ತಾಂತ್ರಿಕ ಸಮಾಲೋಚಕರು(ಇ-ಪಂಚಾಯತ್), ಗ್ರಾಅಪ ಇಲಾಖೆ, ಬೆಂಗಳೂರು.